

ಸಂಭಾಷಣೆ ನಡೆಸಿದ್ದೆ. ಅದು ಹೇಗೆ ಬಂಧುಬಳಗವಿರದ ಸ್ಥಳದಲ್ಲಿ ಯಾರನ್ನೂ ಕೇಳದೇ ಮದುವೆ ಮಾಡಿಕೊಂಡನೊ. ಅಪ್ಪನನ್ನೇ ಲೆಕ್ಕಕ್ಕೆ ತೆಗೆದುಕೊಳ್ಳದವನಿಗೆ ಬಂಧುಬಳಗ ಎಂಥದು? ಒಂದಷ್ಟು ಗೆಳೆಯರನ್ನು ಕರೆದು ತನ್ನ ಸಂಭ್ರಮವನ್ನು ಪ್ರದರ್ಶಿಸಿ ಹೋಗಿದ್ದ. ಎರಡನೆಯ ಬಾರಿ ಬಂದಾಗ ಮೊಮ್ಮಗ ಅವತರಿಸಿದ್ದ. ಮನೆಯಲ್ಲಿದ್ದದ್ದು ಎರಡೇ ದಿನ. ಈ ಎರಡು ದಿನಕ್ಕಾಗಿ ಅಡುಗೆಯವರ ವ್ಯವಸ್ಥೆ ಮಾಡಿದ್ದೆ. ಸೊಸೆಯೊಡನೆ, ಮೊಮ್ಮಗನೊಡನೆ ಮಾತನಾಡೋಣವೆಂದರೆ ಭಾಷಾ ಸಮಸ್ಯೆ. ಎರಡು ವರ್ಷದ ಮೊಮ್ಮಗನನ್ನು ಕರೆದು ಮುದ್ದಿಸೋಣವೆಂದರೆ ಆತ ನನ್ನ ಸಮೀಪ ಕೂಡ ಸುಳೀತಿರ್ಲಿಲ್ಲ. ದೂರದಿಂದಲೇ ನನ್ನನ್ನು ನೋಡುತ್ತಿದ್ದ, ಯಾವುದೋ ಪ್ರಾಣಿಯನ್ನು ಕಂಡ ಹಾಗೆ! ಪ್ರಾಯಶಃ ನಾನುಡುವ ಧೋತರ, ಜುಬ್ಬ ಅವನಿಗೆ ವಿಚಿತ್ರವಾಗಿ ಕಂಡಿರಬೇಕು. ಎಂಟು ದಿನ ಹೆಂಡತಿ ಮಗನೊಡನೆ ಅಲ್ಲಿ ಇಲ್ಲಿ ತಿರುಗಾಡಿ ಹಿಮಾಚಲ ಪ್ರದೇಶಕ್ಕೆ ಹೊರಟುಬಿಟ್ಟ ನನ್ನ ಒಬ್ಬನೇ ಒಬ್ಬ ಮಗ! ಇದೀಗ ಮೊಮ್ಮಗಳು ಅವತರಿಸಿದ್ದಾಳೆ.